Hosa Dhiganthe, 26/02

## ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ದುರಂತ

# ಎಸಿ ಸ್ಫೋಟ: ಮಗು ಸೇರಿ ಮೂವರ ದುರ್ಮರಣ

**ಬೆಂಗಳೂರು:** ರಾಜಧಾನಿ ಬೆಂಗಳೂರಿನಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಐವರು ಧಾರುಣ ಸಾವನ್ನಪ್ಪಿದ್ದಾರೆ.

ಸೋಮವಾರ ತಡರಾತ್ರಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಹವಾನಿಯಂತ್ರಕ ಯಂತ್ರ(ಎಸಿ) ಸ್ಫೋಟಗೊಂಡ ಪರಿಣಾಮ ಒಂದೇ ಕುಟುಂಬದ ಮೂವರು ದರ್ಮರಣವನ್ನಪ್ಪಿದ್ದಾರೆ.

ಆರ್‌ಟಿ ನಗರದ ಮಠದಹಳ್ಳಿಯ ಶಿವರುದ್ರಪ್ಪ ಎಂಬುವರ ಮನೆಯಲ್ಲಿ ಸೋಮವಾರ ರಾತ್ರಿ ಈ ಅವಘಡ ಸಂಭವಿಸಿದೆ.

ಸೋಮವಾರ ಮಧ್ಯಾಹ್ನ ಶಿವರುದ್ರಪ್ಪ ಅವರು ಮನೆಗೆ ಬಂದು ಪತ್ನಿ ವೀಣಾಗೆ ಟೀ ಮಾಡಲು ಹೇಳಿದ್ದಾರೆ. ಅದರಂತೆ ವೀಣಾ ಟೀ ಮಾಡಲೆಂದು ವೀಣಾ ಅಡುಗೆ ಕೋಣೆಗೆ ತೆರಳಿದ್ದಾರೆ. ಇತ್ತ ಶಿವರುದ್ರಪ್ಪ ಎಸಿ ಆನ್ ಮಾಡಿ, ಕಂಪ್ಯೂಟರ್‌ನಲ್ಲಿ ಕೆಲಸ ಮಾಡಲು ಆರಂಭಿಸಿದ್ದಾರೆ. ಆದರೆ, ಇದ್ದಕ್ಕಿದ್ದಂತೆ ಶಾರ್ಟ್ ಸರ್ಕ್ಯೂಟ್ ಆಗಿ ಮೊದಲು ಎಸಿ ಸ್ಫೋಟಗೊಂಡಿದೆ. ಈ ಸ್ಫೋಟ ಸಂಭವಿಸುತ್ತಿದ್ದಂತೆಯೇ ಬೆಂಕಿ ಆವರಿಸಿದ ಹಿನ್ನೆಲೆಯಲ್ಲಿ ಅಡುಗೆ ಕೋಣೆಯಲ್ಲಿದ್ದ ಅನಿಲ ಸಿಲಿಂಡರ್ ಸಹ ಸ್ಫೋಟಗೊಂಡಿದೆ.

ಹೀಗೆ ಎಲ್ಲೆಡೆ ಆವರಿಸಿದ ಬೆಂಕಿಯ ಕೆನ್ನಾಲಗೆಗೆ ಶಿವರುದ್ರಪ್ಪ, ವೀಣಾ ಮತ್ತು ಮಗು ಐಶ್ವರ್ಯ ಸಿಲುಕಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಬೆಂಕಿಯ ಜ್ವಾಲೆಯ ಉರಿ ತಾಳಲಾರದೇ ಮಗು ಸಜೀವದಹನಗೊಂಡಿದೆ.

**ಮಾಹಿತಿ ರವಾನೆ**

ಇತ್ತ ಹೊರಗೆ ಮನೆಯಿಂದ ದಟ್ಟ ಹೊಗೆ ಬರುತ್ತಿದ್ದುದನ್ನು ಕಂಡ ನೆರೆಹೊರೆಯವರು ಅಗ್ನಿಶಾಮಕ ಮತ್ತು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಅದೇ ರೀತಿ ಆಂಬ್ಯುಲೆನ್ಸ್‌ಗೂ ಕರೆ ಮಾಡಿದ್ದಾರೆ. ಆದರೆ, ಆಂಬ್ಯುಲೆನ್ಸ್ ಬರುವ ವೇಳೆಗೆ ದಂಪತಿ ದೇಹಗಳು ಸಾಕಷ್ಟು ಸುಟ್ಟಿದ್ದವು.

ಕೂಡಲೇ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ದಂಪತಿ ಮಂಗಳವಾರ ಕೊನೆಯುಸಿರೆಳೆದಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸಿದ್ದಾರೆ.

26/2/14 SAMYUKTHA KARNATAKA

# ಪ್ರತ್ಯೇಕ ಎಸಿ, ಸಿಲಿಂಡರ್ ಸ್ಫೋಟ;5ಸಾವು



ಬೆಂಗಳೂರು, ಫೆ 25; ನಗರದಲ್ಲಿ ಸಂಭವಿಸಿದ ಪ್ರತ್ಯೇಕ ಘಟನೆಗಳಲ್ಲಿ ಹವಾನಿಯಂತ್ರಣ(ಎಸಿ) ಹಾಗೂ ಸಿಲಿಂಡರ್ ಸ್ಫೋಟಗೊಂಡು ಐವರು ಸಾವನ್ನಪ್ಪಿದ್ದಾರೆ.

ಆರ್.ಟಿ. ನಗರದ ಭಟ್ಟರ ಹಳ್ಳಿಯಲ್ಲಿ ಎಸಿ ಸ್ಫೋಟಿಸಿ ಪತಿ, ಪತ್ನಿ ಹಾಗೂ ಪುತ್ರಿ ಸಾವನ್ನಪ್ಪಿದರೆ ಉಳ್ಳಾಲದಲ್ಲಿ ಮನೆಯಲ್ಲಿದ್ದ ಸಿಲಿಂಡರ್ ಸ್ಫೋಟಗೊಂಡು ಇಬ್ಬರು ಮೃತಪಟ್ಟಿದ್ದಾರೆ. ಭಟ್ಟರಹಳ್ಳಿಯಲ್ಲಿನ ಮನೆಯಲ್ಲಿ ಸೋಮವಾರ ಶಾರ್ಟ್‌ಸರ್ಕ್ಯೂಟ್‌ನಿಂದ ಮನೆಯ ಹವಾನಿಯಂತ್ರಣ(ಎಸಿ) ಸ್ಫೋಟಿಸಿ ಗಂಭೀರವಾಗಿ ಗಾಯಗೊಂಡಿದ್ದ ಪತಿ, ಪತ್ನಿ, ಪುತ್ರಿ ಸಾವನ್ನಪ್ಪಿದ್ದಾರೆ. ಆರ್.ಟಿ. ನಗರದ ಭಟ್ಟರಹಳ್ಳಿಯ ಕಾರು ಚಾಲಕನಾಗಿದ್ದ ಶಿವರುದ್ರಪ್ಪ (33) ಪತ್ನಿ ವೀಣಾ(26) ಪುತ್ರಿ ಐಶ್ವರ್ಯ(3) ಮೃತಪಟ್ಟವರು.

ಶಿವರುದ್ರಪ್ಪ ಅವರ ಶೀಟಿನ ಮನೆಯಲ್ಲಿ ಸೋಮವಾರ ಎಸಿ ಯಂತ್ರ ಸ್ಫೋಟಿಸಿದಾಗ ಇಡೀ ಮನೆ ಹೊತ್ತಿಕೊಂಡಿತ್ತು. ಒಳಗಡೆ ಸಿಕ್ಕ ಮೂವರು ಗಂಭೀರವಾಗಿ ಗಾಯಗೊಂಡರು. ಕೂಡಲೇ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಯಿತು. ಸಂಜೆ ವೇಳೆಗೆ ಮೂವರೂ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ಹೇಳಲಾಗಿತ್ತು. ಆದರೆ ಮಧ್ಯರಾತ್ರಿ ಮೀರಿ 1.45 ರ ಸುಮಾರಿಗೆ ಅವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟರು.

ಉಳ್ಳಾಲದಲ್ಲಿ ಸಿಲಿಂಡರ್ ಸ್ಫೋಟಗೊಂಡು ಇಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಸ್ಫೋಟಕ್ಕೆ ಕಾರಣ ತಿಳಿದುಬಂದಿಲ್ಲ. ಬ್ಯಾಡರಹಳ್ಳಿ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಘಟನೆಯಲ್ಲಿ ಗಾಯಗೊಂಡ ಓರ್ವ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.